**M.V.C.No. 759/2025**
**PW1**

ದಿನಾಂಕ 12.08.2026 ರಂದು ಸಾಕ್ಷಿಯನ್ನು ಕರೆಸಿ ವಿಧಿಬದ್ಧವಾದ ಪ್ರಮಾಣವಚನ ಭೋಧಿಸಲಾಯಿತು.

ಮುಖ್ಯ ವಿಚಾರಣೆಃಅರ್ಜಿದಾರರ ಪರ ಶ್ರೀ ವಿ.ಎಸ್.ಕೆ ವಕೀಲರಿಂದಃ

ಈ ಪ್ರಕರಣದಲ್ಲಿ ನಾನು ಅರ್ಜಿದಾರನಾಗಿದ್ದು, ನನ್ನ ಮುಖ್ಯ ವಿಚಾರಣೆ ಬದಲಿಗೆ ಪ್ರಮಾಣ ಪತ್ರವನ್ನು ಸಲ್ಲಿಸಿದ್ದೇನೆ. ಅದರಲ್ಲಿ ಹೇಳಿರುವ ಎಲ್ಲಾ ಸಂಗತಿಗಳು ಸತ್ಯವಾಗಿರುತ್ತವೆ ಮತ್ತು ಅದರಲ್ಲಿ ನನ್ನ ಸಹಿ ಇದೆ.

ಅಪಘಾತದ ಬಗ್ಗೆ ನನ್ನ ತಮ್ಮ ಪೊಲೀಸರಿಗೆ ನೀಡಿದ ದೂರಿನ ನೈಜ ಪ್ರತಿಯನ್ನು ನಿಪಿ–1 ಎಂದು, ಆ ಬಗ್ಗೆ ಭಾಗಮಂಡಲ ಪೊಲೀಸರು ದಾಖಲಿಸಿದ ಪ್ರ.ವ. ವರದಿಯ ನೈಜ ಪ್ರತಿಯನ್ನು ನಿಪಿ–2 ಎಂದು, ಗಾಯದ ಪ್ರಮಾಣ ಪತ್ರದ ನೈಜ ಪ್ರತಿಯನ್ನು ನಿಪಿ–3 ಎಂದು, ಅಪಘಾತದ ಬಗ್ಗೆ ಪೊಲೀಸರು ನೀಡಿದ ವರದಿಯ ನೈಜ ಪ್ರತಿಯನ್ನು ನಿಪಿ–4 ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಇನ್ನು ಕೆಲವು ದಾಖಲಾತಿಗಳನ್ನು ಹಾಜರು ಪಡಿಸಲು ಪಿ.ಡಬ್ಲ್ಯೂ 1 ರವರು ಸಮಯಾವಕಾಶ ಕೋರಿದ್ದು, ಸಮಯಾವಕಾಶ ನೀಡಲಾಯಿತು)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

(ಓ.ಹೇ.ಕೇ.ಸ.ಇ.ಎ.ಒ)

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಎಂ.ಎ.ಸಿ.ಟಿ, ಸುಳ್ಯ